# ಹೇಮಾವತಿ ಜಲಾಶಯಕ್ಕೆ ಬಾಗಿನ ಮರೆತ ಸರ್ಕಾರ

## ಮುಖ್ಯಮಂತ್ರಿಯಿಂದ ಮಲತಾಯಿ ಧೋರಣೆ | ಶಾಸಕ ಹೆಚ್.ಪಿ. ಸ್ವರೂಪ್ ಆರೋಪ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ರಾಜ್ಯದ ಯಾವುದೇ ಪ್ರಮುಖ ಜಲಾಶಯಗಳು ಭರ್ತಿಯಾದರೆ ತಡಮಾಡದೆ ಬಾಗಿನ ಅರ್ಪಿಸುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲೆಯ ಹೇಮಾವತಿ ಅಣೆಕಟ್ಟೆ ನಿರ್ಲಕ್ಷಿಸಿದ್ದಾರೆಂಬ ಆರೋಪಗಳು ಕೇಳಿಬಂದಿವೆ.

ಈ ಬಾರಿ ಪೂರ್ವ ಮುಂಗಾರು ಹಾಗೂ ಮುಂಗಾರು ಮಳೆ ಚೆನ್ನಾಗಿ ಸುರಿದ ಪರಿಣಾಮ ಜಲಾಶಯ ಭರ್ತಿಯಾಗಿದೆ. ಕೆಆರ್‌ಎಸ್, ಕಬಿನಿ ಜಲಾಶಯಗಳು ತುಂಬಿದ ಹಿನ್ನಲೆಯಲ್ಲಿ ಮುಖ್ಯಮಂತ್ರಿ ನೇತೃತ್ವದಲ್ಲಿ ಬಾಗಿನ ಅರ್ಪಿಸಲಾಗಿದೆ. ಮತ್ತೊಂದೆಡೆ ಜಿಲ್ಲೆಯ ಬಗ್ಗೆ ತಾರತಮ್ಯ ತೋರುತ್ತಿರುವುದು ಏಕೆಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ.

### 37 ಟಿಎಂಸಿ ನೀರು ಸಂಗ್ರಹ

ತಾಲ್ಲೂಕಿನ ಗೊರೂರಿನಲ್ಲಿರುವ ಹೇಮಾವತಿ ಜಲಾಶಯ 2922 ಅಡಿ ಸಾಮರ್ಥ್ಯ ಹೊಂದಿದ್ದು ಸದ್ಯ 2921.98 ಅಡಿ ನೀರು ಹೊಂದಿದೆ. 37.103 ಟಿಎಂಸಿ ನೀರು ಸಂಗ್ರಹದ ಜಲಾಶಯದಲ್ಲಿ ಪ್ರಸ್ತುತ 37.084 ಟಿಎಂಸಿ ನೀರಿದೆ. 6830 ಕ್ಯೂಸೆಕ್ ಒಳಹರಿವು ಇದ್ದು 6995 ಕ್ಯೂಸೆಕ್ ಹೊರ ಹರಿವಿದೆ. 49 ವರ್ಷದಲ್ಲಿ 33ನೇ ಬಾರಿ ಹೇಮಾವತಿ ಜಲಾಶಯ ಭರ್ತಿಯಾಗಿದ್ದು ಹಲವಾರು ವಾರಗಳಿಂದ ಜಲಾಶಯ ಗರಿಷ್ಠ ಮಟ್ಟವನ್ನು ಕಾಯ್ದುಕೊಂಡು ಬರಲಾಗಿದೆ. ಮಳೆ ನಿಂತರೆ ನೀರಿನ ಸಂಗ್ರಹ ಪ್ರಮಾಣ ಕಡಿಮೆಯಾಗಲಿದ್ದು ಅಷ್ಟರೊಳಗೆ ಸಿದ್ದರಾಮಯ್ಯ ಬಾಗಿನ ಸಮರ್ಪಿಸುತ್ತಾರೆಂಬ ಆಶಾಭಾವ ಜನರದ್ದಾಗಿದೆ.

### ಸರ್ಕಾರದ ತಾರತಮ್ಯ ನೀತಿ

ಕೆಆರ್‌ಎಸ್ ಮತ್ತು ಕಬಿನಿ ಜಲಾಶಯಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಚಿವ ಸಂಪುಟದ ಅನೇಕ ಸಚಿವರು



ಬಾಗಿನ ಅರ್ಪಿಸಿದ್ದಾರೆ. ಹೇಮಾವತಿ ಜಲಾಶಯಕ್ಕೆ ಬಾಗಿನ ಅರ್ಪಣೆ ಮಾಡದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಲತಾಯಿ ಧೋರಣೆ ತೋರುತ್ತಿದ್ದಾರೆಂದು ಶಾಸಕ ಹೆಚ್.ಪಿ. ಸ್ವರೂಪ್ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

### ಉಸ್ತುವಾರಿ ಸಚಿವರಿಗೆ ಹೊಣೆ

ಜಿಲ್ಲೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಳೆದ ತಿಂಗಳ ಜುಲೈ 26ರಂದು ಭೇಟಿ ನೀಡಿದ್ದರು. ಅರಸೀಕೆರೆಗೆ ಆಗಮಿಸಿದ್ದ ಅವರು ಆ ದಿನವೇ ಬಾಗಿನ ಅರ್ಪಣೆ ಮಾಡುತ್ತಾರೆಂಬ ಲೆಕ್ಕಾಚಾರ ಹಲವರದ್ದಾಗಿತ್ತು. ಮುಖ್ಯಮಂತ್ರಿ ಅವರನ್ನು ಜಿಲ್ಲೆಗೆ ಕರೆದುಕೊಂಡು ಬರುವಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಪಾತ್ರವೂ ಹೆಚ್ಚಿರುತ್ತದೆ. ಆದರೆ ಈ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಕೆ.ಎನ್. ರಾಜಣ್ಣ ಅವರು ಹಾಸನದ ಬಗ್ಗೆ ಅಷ್ಟೊಂದು ಪ್ರೀತಿ ಹೊಂದಿರಲಿಲ್ಲ.

> ಕೆಆರ್‌ಎಸ್, ಕಬಿನಿಗೆ ನೀಡುವ ಆದ್ಯತೆಯನ್ನು ಹೇಮಾವತಿ ಜಲಾಶಯಕ್ಕೂ ನೀಡಬೇಕು. ಈ ಅಣೆಕಟ್ಟೆ ಹಾಸನ ಜಿಲ್ಲೆಯಲ್ಲಿದೆ ಎಂಬ ಕಾರಣಕ್ಕೆ ಸರ್ಕಾರ ತಾರತಮ್ಯ ಮಾಡಬಾರದು. ಆದಷ್ಟು ಬೇಗ ಸರ್ಕಾರದ ವತಿಯಿಂದ ಬಾಗಿನ ಅರ್ಪಿಸಲು ಕ್ರಮ ಕೈಗೊಳ್ಳಬೇಕು.
>
> -ಹೆಚ್.ಪಿ. ಸ್ವರೂಪ್, ಶಾಸಕ



ಅವರೇ ಅಪರೂಪಕ್ಕೊಮ್ಮೆ ಬರುತ್ತಿದ್ದರಿಂದ ಮುಖ್ಯಮಂತ್ರಿಯನ್ನು ಕರೆಸುವುದೆಲ್ಲ ಅಸಾಧ್ಯ ಎಂಬಂತಿತ್ತು. ಈಗ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕೃಷ್ಣಬೈರೇಗೌಡ ಅವರನ್ನು ನೇಮಕ ಮಾಡಲಾಗಿದೆ. ಆ. 15ರ ಸ್ವಾತಂತ್ರ್ಯ ದಿನಾಚರಣೆಯಂದು ಜಿಲ್ಲೆಗೆ ಆಗಮಿಸಲಿದ್ದು ಆ ಬಳಿಕ ಬಾಗಿನ ಅರ್ಪಣೆ ಸಮಾರಂಭಕ್ಕೆ ದಿನ ನಿಗದಿ ಮಾಡುತ್ತಾರೆಂದು ಕಾಂಗ್ರೆಸ್‌ನ ಮುಖಂಡರು ಹೇಳುತ್ತಾರೆ.

# ಪ್ಲಾಸ್ಟಿಕ್ ರಾಷ್ಟ್ರಧ್ವಜ ಬಳಕೆ ಬೇಡ: ತಹಶೀಲ್ದಾರ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹೊಳೆನರಸೀಪುರ: ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪ್ಲಾಸ್ಟಿಕ್ ರಾಷ್ಟ್ರಧ್ವಜ ಬಳಸದೆ ಬಟ್ಟೆಯಿಂದ ತಯಾರಾದ ಧ್ವಜ ಬಳಸಿ ಪರಿಸರಕ್ಕೆ ನೆರವಾಗಬೇಕು ಎಂದು ತಹಶೀಲ್ದಾರ್ ವೈ.ಎಂ. ರೇಣುಕುಮಾರ್ ಮನವಿ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ಲಾಸ್ಟಿಕ್‌ನಿಂದ ತಯಾರಿಸುವ ತಿರಂಗ ಬಾವುಟಗಳನ್ನು ವರ್ತಕರು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಬಟ್ಟೆಯಲ್ಲಿ ತಯಾರಿಸಿರುವ ರಾಷ್ಟ್ರಧ್ವಜ ಮಾರಾಟ ಮಾಡಬೇಕು ಎಂದರು.

ಇತ್ತೀಚಿನ ದಿನಗಳಲ್ಲಿ ತಿರಂಗಗಳನ್ನು ಹೆಚ್ಚು ಬಳಸುತ್ತಿದ್ದು, ಅವುಗಳನ್ನು ಉಪಯೋಗಿಸುವುದು ಸೂಕ್ತವಲ್ಲ. ಈ ನಿಟ್ಟಿನಲ್ಲಿ ವರ್ತಕರು ಮತ್ತು ಸಾರ್ವಜನಿಕರು ಪ್ಲಾಸ್ಟಿಕ್ ತಿರಂಗದ ಬದಲಾಗಿ ಬಟ್ಟೆ ತಿರಂಗ ಉಪಯೋಗಿಸಬೇಕು ಎಂದು ಹೇಳಿದರು.

ಸ್ವಾತಂತ್ರ್ಯೋತ್ಸವ ಪ್ರಯುಕ್ತ ಪಟ್ಟಣದನಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು ತಮ್ಮ ಕಚೇರಿಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸುವ ಮೂಲಕ ಸಂಭ್ರಮದಲ್ಲಿ ಭಾಗಿಯಾಗಬೇಕು. ವಿವಿಧ ಸಂಘ ಸಂಸ್ಥೆಗಳು ಸಹ ಸ್ವಾತಂತ್ರ್ಯ ದಿನಕ್ಕೆ ಮೆರುಗು ತರಬೇಕೆಂದರು.

# ಐಬಿಆರ್-ಅಬ್ದುಲ್ ಕಲಾಂ ವರ್ಲ್ಡ್ ರೆಕಾರ್ಡ್‌ಗೆ ಐರಾ ವಿಹಾನ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಒಂದೂವರೆ ವರ್ಷದ ಬಾಲಕಿ ಚಿಕ್ಕ ವಯಸ್ಸಿನಲ್ಲೇ ಅಗಾಧ ಪಾಂಡಿತ್ಯದಿಂದ ಇಂಡಿಯಾ ಬುಕ್ ಆಫ್ ರೆಕಾರ್ಡ್ ಹಾಗೂ ಕಲಾಂ ವರ್ಲ್ಡ್ ರೆಕಾರ್ಡ್‌ನಿಂದ ಪ್ರಮಾಣ ಪತ್ರ ಪಡೆದಿದ್ದಾರೆ.

ನಗರದ ಉದಯಗಿರಿ ನಿವಾಸಿ ಪ್ರವೀಣ್ ದೇವಪ್ಪ ಮತ್ತು ತನುಶ್ರೀ ಅವರ ಪುತ್ರಿ ಐರಾ ವಿಹಾನ ಸಾಧಕ ಬಾಲಕಿ. ಸಣ್ಣ ವಯಸ್ಸಿನಲ್ಲೇ ಅದ್ಭುತ ಜ್ಞಾಪಕ ಶಕ್ತಿಯಿಂದಾಗಿ ಗುರುತರ ಸಾಧನೆ ಮಾಡಿರುವುದು ಕುಟುಂಬಸ್ಥರು ಸಂತಸ ವ್ಯಕ್ತಪಡಿಸಿದ್ದಾರೆ.

ಬಾಲಕಿ ಐರಾ ವಿಹಾನ ಶರೀರದ 17 ಅಂಗ, 23 ಪ್ರಾಣಿಗಳ ಹೆಸರು, 9 ಜಲಚರ ಪ್ರಾಣಿ, 17 ಹಣ್ಣು, 16 ತರಕಾರಿ, 9 ಕಾರು ಸಂಬಂಧಿತ ವಸ್ತುಗಳು, 6 ಪಕ್ಷಿ, 24 ಇತರ ವಸ್ತುಗಳನ್ನು ತನ್ನ ಬುದ್ಧಿ ಕ್ಷಮತೆಯಿಂದ ನಿರಾಳವಾಗಿ ಗುರುತಿಸಿ ಅದರ ವಿವರಣೆಯನ್ನು ನೀಡುತ್ತಾಳೆ. ಜೊತೆಗೆ 9 ತುಣುಕುಗಳ ಆಕಾರ ಪಝಲ್ ಹಾಗು 8 ತುಣುಕುಗಳ ತರಕಾರಿ, ಹಣ್ಣು ಮತ್ತು ವಾಹನಗಳ ಪಝಲ್‌ಗಳನ್ನು ಬಗೆಹರಿಸುತ್ತಾಳೆ. ಐರಾಳ ಈ ಸಾಧಗೆ ಐಬಿಆರ್ ಹಾಗು ಅಬ್ದುಲ್ ಕಲಾಂ ವರ್ಲ್ಡ್ ರೆಕಾರ್ಡ್ ಪ್ರಮಾಣ ಪತ್ರ ನೀಡಿದೆ.

# ಮನೆ ಬೀಗ ಮುರಿದು ಚಿನ್ನಾಭರಣ ಕಳವು

ಹಾಸನ: ಮನೆ ಬಾಗಿಲು ಬೀಗ ಮುರಿದು ಒಳನುಗ್ಗಿರುವ ಕಳ್ಳರು 2.20 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ವಿಜಯನಗರ ಬಡಾವಣೆಯಲ್ಲಿ ನಡೆದಿದೆ.

ನಿವಾಸಿ ಮಹೇಂದ್ರ ಹಾಗೂ ಹೆಂಡತಿ ಶೀಲಾ ಅವರು ಶ್ರಾವಣ ಮಾಸದ ಹಿನ್ನೆಲೆಯಲ್ಲಿ ಅಣ್ಣಿಗನಹಳ್ಳಿಯ ಸಂಬಂಧಿಕರ ಮನೆಗೆ ತೆರಳಿದ್ದರು.

ಆ. 10ರಂದು ಬೆಳಿಗ್ಗೆ ಮಹೇಂದ್ರ ಅವರು ಮನೆಗೆ ಬಂದು ನೋಡಿದಾಗ ಬಾಗಿಲು ಮುರಿದಿರುವುದು ಗೊತ್ತಾಗಿದೆ. ಬೀರುವಿನ ಬಾಗಿಲು ಮುರಿದಿರುವ ಕಳ್ಳರು 8 ಗ್ರಾಂ ತೂಕದ ಒಂದು ಜೊತೆ ಓಲೆ, 4 ಗ್ರಾಂ ತೂಕದ ಒಂದು ಜೊತೆ ಚಿನ್ನದ ಓಲೆ, 2 ಗ್ರಾಂ ತೂಕದ ಒಂದು ಜೊತೆ ಚಿನ್ನದ ಓಲೆ, ಮಕ್ಕಳ 1 ಗ್ರಾಂ ತೂಕದ 3 ಉಂಗುರ, 2 ಗ್ರಾಂ ತೂಕದ 2 ಉಂಗುರ, 2 ಜೊತೆ ಬೆಳ್ಳಿಯ 26 ಗ್ರಾಂ ತೂಕದ ಕಾಲುಚೈನು, 2 ಜೊತೆ ಬೆಳ್ಳಿಯ 38 ಗ್ರಾಂ ತೂಕದ ಕಾಲುಚೈನು, 12 ಗ್ರಾಂ ತೂಕದ ಬೆಳ್ಳಿಯ ಬ್ರಾಸ್ ಲೈಟ್ ಕಳುವಾಗಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ನಲ್ಲಿ ರಿಪೇರಿ ನೆಪದಲ್ಲಿ ಬಂದು ಚಿನ್ನಾಭರಣ ಕಳವು

ಅರಸೀಕೆರೆ: ನಗರಸಭೆ ಸಿಬ್ಬಂದಿ ಎಂದು ನೀರಿನ ನಲ್ಲಿ ಕೆಲಸಕ್ಕಾಗಿ ಬಂದಿರುವುದಾಗಿ ಸುಳ್ಳು ಹೇಳಿ ಹೇಳಿದ ದುಷ್ಕಮಿಗಳಿಬ್ಬರು 8.95 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಎಗರಿಸಿ ಪರಾರಿಯಾಗಿದ್ದಾರೆ.

ಶ್ರೀನಗರದ ನಾರಾಯಣ ಅವರ ಪತ್ನಿ ಚಂದ್ರಕಲಾ ಮನೆಯಲ್ಲಿ ಒಬ್ಬರೇ ಇದ್ದಾಗ ಮನೆಗೆ ಬಂದ ಇಬ್ಬರು ಅಪರಿಚಿತರು ತಾವು ನಗರಸಭೆಯವರು ಎಂದು ಪರಿಚಯ ಮಾಡಿಕೊಂಡಿದ್ದಾರೆ. ನಿಮ್ಮ ಮನೆಯಲ್ಲಿ ನಲ್ಲಿಯ ನೀರು ಬರುತ್ತಿದೆಯೇ ಎಂದು ಕೇಳಿದಾಗ ಚಂದ್ರಕಲಾ ಅವರು ಬರುತ್ತಿದೆ ಎಂದಿದ್ದು, ನೀರಿನ ಸಿಂಟೆಕ್ಸ್ ಹತ್ತಿರ ಫಿಲ್ಟರ್ ಅಳವಡಿಸಬೇಕು, ಜಾಗ ತೋರಿಸಿ ಎಂದು ಹೇಳಿದ್ದಾರೆ. ಆಗ ಚಂದ್ರಕಲಾ ಅವರನ್ನು ಕರೆದುಕೊಂಡು ಮಹಡಿ ಮೇಲೆ ಹೋಗಿದ್ದಾರೆ. ಇಬ್ಬರೂ ಟ್ಯಾಂಕ್ ಹತ್ತಿರ ಟೇಪ್ ಹಿಡಿದು ಅಳತೆ ಮಾಡಿ ಮಾತನಾಡುತ್ತಾ ಕಾಲ ಕಳೆದಿದ್ದಾರೆ. ಈ ವೇಳೆ ಚಂದ್ರಕಲಾ ಅವರ ಗಮನ ಬೇರೆಡೆ ಸೆಳೆದು ಕೆಳಗಿಳಿದು ಬಂದ ಅವರು ಬೀರುವಿನಲ್ಲಿಟ್ಟಿದ್ದ 179 ಗ್ರಾಂ ತೂಕದ ಅಂದಾಜು 8.95 ಲಕ್ಷ ರೂ. ಮೌಲ್ಯದ ಚಿನ್ನಾಭರಣದೊಂದಿಗೆ ಪರಾರಿಯಾಗಿದ್ದಾರೆ.

# ನಿಸ್ವಾರ್ಥ ಸಮಾಜ ಸೇವಕರ ಸಂಖ್ಯೆ ಹೆಚ್ಚಬೇಕು

- ಅವರೇಕಾಡು ಪೃಥ್ವಿ





ಈ ಹುಡುಗ ಚಂದನ್ ಅಂತ ಹಾನುಬಾಳುವಿನ ಪ್ಲಾಂಟರ್ಸ್ ಕ್ಲಬ್ ನಲ್ಲಿ ಉದ್ಯೋಗ ಮಾಡುತ್ತಾನೆ, ಕೃಷಿ ಕಾರ್ಮಿಕರ ಮಗ ಈ ಚಂದನ್. ನನಗೆ ಒಂದು ದಿನ ಕರೆ ಮಾಡಿ ಹಾನುಬಾಳುವಿನ ಇಂದಿರಾ ನಗರ (ಕೂಡಿಗೆ )ದಲ್ಲಿರುವ ಬಹುತೇಕ ಕೃಷಿ ಕಾರ್ಮಿಕರ ಮಕ್ಕಳೇ ವಿದ್ಯಾಭ್ಯಾಸ ಮಾಡುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮೇಲೆ ಹಿಂದೆ ಇರುವ ಅಕೇಶಿಯಾ ಮರ ಬೀಳಲು ಆಗಿದೆ. ಅದರಿಂದ ಶಾಲೆ ಕಟ್ಟಡ ಮತ್ತು ಮಕ್ಕಳಿಗೆ ಅಪಾಯವಿದೆ ಅಂತ ಮಾಹಿತಿ ಕೊಟ್ಟಿದ್ದು, ತಕ್ಷಣ ಸ್ಥಳಕ್ಕೆ ಹೋಗಿ ಅರಣ್ಯ ಇಲಾಖೆ ಸಂಪರ್ಕಿಸಿ ಆ ಮರಗಳನ್ನ ತೆರವು ಮಾಡಿಸಿ ಕೊಟ್ಟಿದ್ದೆ.

ಶಾಲೆ ಕಡೆ ಬೀಳಲು ಇದ್ದ ಮರಗಳನ್ನ ತೆರವುಗೊಳಿಸಲು ಬಹಿರಂಗ ಹರಾಜು ಹಾಕಲಾಗಿತ್ತು. ಅದನ್ನ ಹಾನುಬಾಳು ಅಬೂಬಕ್ಕರ್ ಅನ್ನುವರು ಹರಾಜುವಿನಲ್ಲಿ ಪಡೆದಿದ್ದರು. ಮರ ತೆರವು ಮಾಡುವಾಗ ಕೊಂಬೆ ತಾಗಿ ಶಾಲೆ ಶೌಚಾಲಯದ ಮೂರು ಆಸ್ಪರ್ ಶೀಟ್ ಒಡೆದು ಹೋಗಿದ್ದವು. ಅದನ್ನು ಹಾಕಿಸಿಕೊಡುವಂತೆ ಚಂದನ್ ನನ್ನಲಿ ಕೇಳಿದ್ದ. ಮರ ತೆರವು ಮಾಡಿದ್ದ ಅಬೂಬಕ್ಕರ್ ಅವರಲ್ಲಿ ಕೇಳುವಂತ ಹೇಳಿದ್ದೆ. ಅವನು ಅವರನ್ನ ಕೇಳಲು ಹಿಂಜರಿಕೆ ಮಾಡಿದ, ನೀನೆ ಕೇಳು ಅವರು ಆಗದಿದ್ದರೆ ನಾನು ಮಾಡಿಸಿಕೊಡುತ್ತೇನೆ ಅಂತ ಹೇಳಿದೆ. ನನಗೆ ಗೊತ್ತಿತ್ತು ಅವರು ಆಸ್ಪರ್ ಶೀಟ್ ಕೊಡಿಸುತ್ತಾರೆ ಅಂತ, ಅವರು ಅವನ ಮಾತಿಗೆ ಕೊಡಿಸಿದರು, ಅನಂತರ ಶೀಟ್ ಅನ್ನು ಇವರೇ ಹಾಕಿದ್ದಾರೆ.

ನನಗೆ ಅಬೂಬಕ್ಕರ್ ಹತ್ರ ಇವನು ಹೇಳಿದ ತಕ್ಷಣ ಮಾತನಾಡಲು ಅದು ಒಂದು ದೊಡ್ಡ ವಿಷಯ ಆಗಿರಲಿಲ್ಲ. ಇವನ ಹತ್ರನೆ ಹೇಳಿ ಕೆಲಸ ಮಾಡಿಸಬೇಕು ಅಂತ ಇತ್ತು. ಇವನ ಹಿಂಜರಿಕೆ ಹೋಗಲಾಡಿಸಿ ವಿಶ್ವಾಸ ತುಂಬಿ ಇವನನ್ನು ಸಮಾಜದ ಆಗು ಹೋಗುಗಳಿಗೆ ಜೋಡಿಸಿಕೊಳ್ಳಬೇಕು ಅನ್ನುವ ನಿಲುವು ನನ್ನದು.

ಇಂತಹ ನಿಸ್ವಾರ್ಥರ ಸಂಖ್ಯೆ ಸಮಾಜದಲ್ಲಿ ಅಧಿಕವಾಗಬೇಕು. ಆದಾಗಲೇ ಸಮಾಜ ದೇಶ ಸುಧಾರಣೆ ಆಗುವುದು ಹಾಗೆ ಶಾಲೆಯಲ್ಲಿ ಅಡುಗೆ ಮನೆ ನೀರು ಹೋಗಲು ಸರಿಯಾದ ವ್ಯವಸ್ಥೆ ಇರಲಿಲ್ಲ. ಅದಕ್ಕೆ ಏನಾದ್ರೋ ವ್ಯವಸ್ಥೆ ಮಾಡಿಸಿ ಕೊಡುವಂತೆ ಕೇಳಿದ್ದ. ತಕ್ಷಣ ಹಾನುಬಾಳು ಗ್ರಾಮ ಪಂಚಾಯಿತಿ ಅಧ್ಯಕ್ಷ ಸಂತೋಷ ಶೆಟ್ಟಿ ಹಾಗು ಹರೀಶ್ ಶೆಟ್ಟಿ ಅವರ ಜೊತೆ ಇದರ ಬಗ್ಗೆ ಮಾತನಾಡಿದಾಗ ತಕ್ಷಣ ಅಲ್ಲಿ ಇಂಗು ಗುಂಡಿ ಮಾಡಿಸಿ ಕೊಡುವುದಾಗಿ ಹೇಳಿದ್ದಾರೆ.

ಸಮಾಜದಲ್ಲಿ ಒಳ್ಳೆ ಕೆಲಸ ಮಾಡಲು ಸಮಾಜದ ಕೆಲಸಕ್ಕೆ ಸ್ಪಂದಿಸಲು ರಾಜಕೀಯ ಹಿನ್ನಲೆ, ಜಾತಿ ಹಿನ್ನಲೆ, ದುಡ್ಡಿನ ಹಿನ್ನಲೆಯವರು ಮಾತ್ರ ಬರಬೇಕು ಅನ್ನುವ ನಿಯಮವೇನು ಇಲ್ಲ. ಇಂತ ಸಾಮಾನ್ಯರಲ್ಲಿ ಸಾಮಾನ್ಯ ಜನರಲ್ಲು ಸಮಾಜದ ಬಗ್ಗೆ ಇರುವ ಕಾಳಜಿಗೆ ಸ್ಪಂದಿಸಿ, ಗುರುತಿಸಿ ಮಾರ್ಗದರ್ಶನ ನೀಡಿ ಅವರಲ್ಲಿ ವಿಶ್ವಾಸ ತುಂಬಿ ಮುಖ್ಯ ವಾಹಿನಿಯಲ್ಲಿ ಜೋಡಿಸಿ ಕೊಳ್ಳಬೇಕು ಅನ್ನುವುದು ನನ್ನ ನಿಲುವು. ಚಿಕ್ಕ ಚಿಕ್ಕ ವಿಷಯಗಳನ್ನೇ ಗುರುತಿಸಿ ಪ್ರೋತ್ಸಾಹ ನೀಡಿದರೆ ಸಮಾಜದಲ್ಲಿ ಹಲವು ಸಮಸ್ಯೆಗಳು ಬಗೆ ಹರಿಯುತ್ತವೆ. ದೇಶ, ಸಮಾಜ ಪ್ರೀತಿಸಿ ಕಾಳಜಿ ತೋರುವ ಎಲ್ಲರದ್ದೂ ಸಹ.

# ಚವ್ವೇನಹಳ್ಳಿಯಲ್ಲಿ ಲಕ್ಷ್ಮಿದೇವಿಗೆ ವಿಶೇಷ ಪೂಜೆ



ಚನ್ನರಾಯಪಟ್ಟಣ: ತಾಲ್ಲೂಕಿನ ಚವ್ವೇನಹಳ್ಳಿ ಗ್ರಾಮದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಶ್ರೀ ಲಕ್ಷ್ಮೀದೇವಿ ಅಮ್ಮನವರ ದೇವಾಲಯದಲ್ಲಿ ವಿಶೇಷ ಪೂಜೆ ಹಾಗೂ ಅನ್ನ ಸಂಪರ್ಪಣೆ ನೆರವೇರಿತು. ಶ್ರೀ ಲಕ್ಷ್ಮಿದೇವಿ ಹಬ್ಬದ ಪ್ರಯುಕ್ತ ದೇವಾಲಯದಲ್ಲಿ ಬೆಳಿಗ್ಗೆಯಿಂದಲೇ ವಿಶೇಷ ಪೂಜೆ ಅಭಿಷೇಕ ಹೂವಿನ ಅಲಂಕಾರ ಸೇರಿ ಮಹಾಮಂಗಳಾರತಿ ನೆರವೇರಿತು. ಮಳೆ ನಡುವೆಯೂ ಗ್ರಾಮದ ಮಹಿಳೆಯರು ತಂಬಿಟ್ಟಿನ ಆರತಿಯೊಂದಿಗೆ ದೇವಾಲಯಕ್ಕೆ ಆಗಮಿಸಿ ಗ್ರಾಮದಲ್ಲಿ ಉತ್ತಮ ಮಳೆ ಬೆಳೆಯಾಗಲಿ ಹಾಗು ತಮ್ಮ ಕುಟುಂಬಕ್ಕೆ ಒಳಿತಾಗಲಿ ಎಂದು ಶ್ರೀ ಲಕ್ಷ್ಮ ದೇಶ್ರೀ ಲಕ್ಷ್ಮದೇವಿ ಹಬ್ಬದ ಪ್ರಯುಕ್ತ ಗ್ರಾಮದ ವತಿಯಿಂದ ಭಕ್ತರಿಗೆ ಅನ್ನಸಂತರ್ಪಣೆ ವಿತರಿಸಲಾಯಿತು. ಮುಖಂಡರಾದ ಸಿ.ಆರ್. ಮಧು, ಲೋಕೇಶ್, ನಾಗರಾಜ್, ಸಿ.ಜಿ. ರಮೇಶ್, ಸುರೇಶ್, ಅರಸೇಗೌಡ, ಜಗದೀಶ್, ಡೈರಿ ಕಾರ್ಯದರ್ಶಿ ಮಣಿ, ಅರ್ಚಕ ಗೋಪಿ, ಮಂಜುನಾಥ್ ಮತ್ತಿತರರು ಇದ್ದರು.

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-12

1877: ಪೆರಿನ ಮೂಲಕ ಧ್ವನಿಯನ್ನು ರೆಕಾರ್ಡ್ ಮಾಡುವ ಪರ್ಫೋನೋಗ್ರಾಫ್ ಅನ್ನು ಥಾಮಸ್ ಎಡಿಸನ್ ಕಂಡುಹಿಡಿದರು.

1521: ಸ್ಪ್ಯಾನಿಷ್ ಸಾಹಸಿಕ ಹೋನಾನ್ ಕಾರ್ಟೆಸ್, ಟೆನೋಚ್ಟಿಟ್ಲಾನ್ ಅನ್ನು ಕೈಗೊಳ್ಳುವ ಮೂಲಕ ಅಜ್ಟೆಕ್ ಸಾಮ್ರಾಜ್ಯವನ್ನು ಮೀರಿಸಿದರು.

1973: ಗೋಲ್ಡನ್ ಬರ್ ಜಾಕ್ ನಿಕ್ಲಾಸ್ 14ನೇ ಪ್ರಮುಖ ಚಾಂಪಿಯನ್ ಶಿಪ್ ಗೆಲ್ಲುವ ಮೂಲಕ ದಾಖಲೆ ಮುರಿದರು.

1985: ಜಪಾನ್ ಏರ್‌ಲೈನ್ಸ್ 747 ವಿಮಾನವು ಟೋಕಿಯೋ ಹಾನೇಡಾ ವಿಮಾನ ನಿಲ್ದಾಣದಿಂದ ಎತ್ತಿಕೊಂಡು ಮೌಂಟ್ ಒಟ್ಸು ಕಾ ಪರ್ವತಕ್ಕೆ ಡಿಕ್ಕಿ ಹೊಡೆದಾಯಿತು.

2000: ರಷ್ಯಾದ 'ಕುರ್ಸ್ಕ್' ನ್ಯೂಕ್ಲಿಯರ್ ಸಬ್‌ಮೆರಿನ್ ಬರೆಚಿನ ಸಮುದ್ರದಲ್ಲಿ ಮುಳುಗಿತು.

### ಜನನ

1881: ಅಮೆರಿಕದ ಖ್ಯಾತ ಸಿನಿಮಾಗ್ರಹಕ ಮತ್ತು ನಿರ್ದೇಶಕ.

1887: ನ್ಯೂಕ್ಲಿಯರ್‌ಗಣಿತ ಶಾಸ್ತ್ರದಲ್ಲಿ ಮಹತ್ವದ ಕೊಡುಗೆ ನೀಡಿದ ಆಸ್ಟ್ರಿಯನ್.

1924: ಮಹಮ್ಮದ್ ಜಿಯಾ ಉಲ್ ಹಕ್, ಪಾಕಿಸ್ತಾನದ 6ನೇ ಅಧ್ಯಕ್ಷ.

### ಮರಣ

30ಬಿಸಿ: Cleopatra ಪತಿವ್ರತೀಯ ಶ್ರೀಮತಿ, ಈಜಿಪ್ಷಿಯನ್ ರಾಣಿ.

1827: William Blake ಇಂಗ್ಲೆಂಡಿನ ಮಹತ್ವದ ಕವಿ.

# 'ಮಾರ್ಜಾಲ ಮೋಹಿನಿಯರು'

- ರಜನೀಶ್ ಸಾಗರ




ಇಲ್ಲಿಯು ಹಾಸ್ಯ ಲೇಖನಗಳು ಲೇಖಕಿಯ ಸ್ವಅನುಭವಗಳೆನ್ನಬಹುದು. ಅದನ್ನೇ ಸ್ವಲ್ಪ ವಿಸ್ತರಿಸಿ, ಎತ್ತರಿಸಿ, ಅಲ್ಪಸ್ವಲ್ಪ ಮೇಕಪ್ ಮಾಡಿಸಿ ಬರೆದಾಗ ಸ್ವಾರಸ್ಯಕರವಾಗಿದ್ದು, ಓದಿಸಿಕೊಂಡು ಹೋಗುತ್ತದೆ. ಮೊದಮೊದಲು ಮುಗುಳು ನಗೆ ಮತ್ತೆ ನಗುವಿನಲೆ ಮುಂದೆ ಮೆಚ್ಚುಗೆಯ ಹೊಟ್ಟೆ ಹುಣ್ಣಾಗಿಸುವಂತೆ ನಗೆ ಉಕ್ಕಿಬರುತ್ತದೆ.

ನಾವು ತೀರಾ ಸಾಮಾನ್ಯವೆಂದು ಕಡೆಗಣಿಸುವ ಎಳೆಯೊಂದನ್ನು ಹಿಡಿದು ಹಾಸ್ಯ ಲೇಖಕರು ನಮಗೆ ಒಪ್ಪಿಸಬಲ್ಲರು. ಮುಖ್ಯವಾಗಿ ನಮ್ಮಲ್ಲಿ ಹಾಸ್ಯ ಪ್ರಜ್ಞೆ ಇರಬೇಕಷ್ಟೇ. ಇಲ್ಲಿಯ ವೈವಿಧ್ಯಗಳಿಂದ ಕೂಡಿರುವ ಬರಹಗಳೆಲ್ಲ ಉತ್ತಮವಾಗಿದ್ದು, ಓದುಗರು ಮೆಚ್ಚುವಂತಿವೆ. ಈ ಸಂಕಲನದ ಟಿನಮ್ಮ ಕಾರು ಸತ್ತು ಹೋಗಿದ್ದುಟಿ ಮಂಗಳೂರು ಆಕಾಶವಾಣಿಯಲ್ಲಿ ಬಿತ್ತರಗೊಂಡು ನಂತರ ಪ್ರಜಾವಾಣಿಯ ಭೂಮಿಕಾ, ಸಂಕ್ರಾಂತಿ ಹಾಸ್ಯ ಲೇಖನಗಳ ಸ್ಪರ್ಧೆಯಲ್ಲೂ ಬಹುಮಾನ ಗಳಿಸಿ, ಪ್ರಕಟವಾಯಿತು. ಟಿಮಾರ್ಜಾಲ ಮೋಹಿನಿಯರುಟಿ ಆಕಾಶವಾಣಿ ಮಂಗಳೂರು ಇಲ್ಲಿಂದ ಬಿತ್ತರಗೊಂಡು ಈಗ ನಿಮ್ಮೆದುರುಗಿದೆ. ಇಲ್ಲಿಯ ಹಲವು ಹಾಸ್ಯ ಲೇಖನಗಳು ಆಕಾಶವಾಣಿ ಮಂಗಳೂರು, ಭದ್ರಾವತಿ ಇಲ್ಲಿಂದ ಬಿತ್ತರಗೊಂಡಿದೆ. ನಾಡಿನ ಸುಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಟಿಹೆಬ್ಬಲಸು ಪುರಾಣಟಿವು ಅನಂತ ಪ್ರಕಾಶನ ಕಿನ್ನಿಗೋಳಿ ಇವರ ಹಾಸ್ಯ ಲೇಖನಗಳ ಸ್ಪರ್ಧೆಯಲ್ಲಿ ಬಹುಮಾನಗಳಿಸಿ, ಅವರ ವಿಶೇಷಾಂಕದಲ್ಲಿ ಪ್ರಕಟವಾಗಿದೆ.

ಲೇಖಕಿ ಸುಕನ್ಯಾಕಳಸ ಉತ್ತಮ ಬರಹಗಾರ್ತಿ, ಅದರಲ್ಲೂ ಹಾಸ್ಯ ಬರವಣಿಗೆಯಲ್ಲಿ ಪಳಗಿದ ಕೈಯೆನ್ನಬಹುದು. ಇವರ ಹಲವು ಕೃತಿಗಳು ಬೇರೆ ಬೇರೆ ಪ್ರಕಾಶನಗಳಲ್ಲಿ ಬೆಳಕು ಕಂಡಿವೆ. ಟಿಮಾರ್ಜಾಲ ಮೋಹಿನಿಯರುಟಿ ಹಾಸ್ಯ ಲೇಖನಗಳ ಈ ಕೃತಿಯನ್ನು ಕನ್ನಡದ ಹೆಮ್ಮೆಯ ಪ್ರಕಾಶನ, ನವಕರ್ನಾಟಕ ಪ್ರಕಾಶನ, ಬೆಂಗಳೂರು ಪ್ರಕಟಿಸಿದೆ .ಸುಮಾರು 100 ಪುಟಗಳನ್ನು ಹೊಂದಿರುವ ಈ ಕೃತಿಯು ರೂ. 125 ಮುಖಬೆಲೆಯನ್ನು ಹೊಂದಿದೆ. ಸಹೃದಯ ಓದುಗರಿಗೆ ರವೀಂದ್ರ ಪುಸ್ತಕಾಲಯ, ಚಾಮರಾಜಪೇಟೆ, ಸಾಗರ ಇಲ್ಲಿ ರಿಯಾಯಿತಿ ದರದಲ್ಲಿ ದೊರಕುತ್ತದೆ.

# ಎಸ್‌ಎಸ್‌ಎಲ್‌ಸಿ ಫಲಿತಾಂಶ: 3ನೇ ಸ್ಥಾನಕ್ಕೆ ಜಿಗಿದ ಹಾಸನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಎಸ್‌ಎಸ್‌ಎಲ್‌ಸಿ 2024-25ನೇ ಸಾಲಿನ ಪರೀಕ್ಷೆಯಲ್ಲಿ ಎ ಗ್ರೇಡ್ ಪಡೆಯುವ ಮೂಲಕ ಹಾಸನ ಜಿಲ್ಲೆ ರಾಜ್ಯಕ್ಕೆ ಮೂರನೇ ಸ್ಥಾನ ಪಡೆದಿದೆ.

2025ರ ಮೇ 2ರಂದು ಪ್ರಕಟವಾದ ಪರೀಕ್ಷೆ 1ರ ಫಲಿತಾಂಶದಲ್ಲಿ ಶೇ. 82.12 ಫಲಿತಾಂಶದ ಮೂಲಕ 6ನೇ ಸ್ಥಾನ ಪಡೆದಿತ್ತು. ನಂತರ ನಡೆದ ಪರೀಕ್ಷೆ 2 ಮತ್ತು 3ರ ಫಲಿತಾಂಶ ಇತ್ತೀಚೆಗೆ ಪ್ರಕಟವಾಗಿದ್ದು ಗುಣಮಟ್ಟ ಹಾಗೂ ಉತ್ತೀರ್ಣ ವಿದ್ಯಾರ್ಥಿಗಳ ಸಂಖ್ಯೆ ಪರಿಗಣಿಸಿ ಶೇ. 77.32 ಫಲಿತಾಂಶದೊಂದಿಗೆ ಎ ಶ್ರೇಣಿಗೆ ಭಾಜನವಾಗಿದೆ. ಶೇ. 82.08 ಅಂಕಗಳೊಂದಿಗೆ ಉಡುಪಿ ಹಾಗೂ ದಕ್ಷಿಣ ಕನ್ನಡ ಶೇ. 82.03 ಫಲಿತಾಂಶದ ಮೂಲಕ ಪ್ರಥಮ, ದ್ವಿತೀಯ ಸ್ಥಾನ ಪಡೆದಿವೆ. ಹಾಸನ ಹಾಗೂ ಶಿವಮೊಗ್ಗ ಜಿಲ್ಲೆಗಳು ಎ ಶ್ರೇಣಿಯೊಂದಿಗೆ ಮೂರನೇ ಸ್ಥಾನವನ್ನು ಖಾತ್ರಿ ಮಾಡಿಕೊಂಡಿವೆ. ಒಟ್ಟು 19285 ವಿದ್ಯಾರ್ಥಿಗಳು ಪರೀಕ್ಷೆ ಬರೆದು 17519 ಮಕ್ಕಳು ಪಾಸಾಗಿದ್ದಾರೆ. ಉತ್ತೀರ್ಣರ ಶೇಕಡಾವಾರು ಫಲಿತಾಂಶದಲ್ಲಿ ಶೇ. 90 ಹಾಗೂ ಗುಣಮಟ್ಟದಲ್ಲಿ ಶೇ. 77.32 ಅಂಕಗಳನ್ನು ಹಾಸನ ಜಿಲ್ಲೆ ಪಡೆದಿದೆ. ಪರೀಕ್ಷೆ 2 ಹಾಗೂ 3ರಲ್ಲಿ ಉತ್ತಮ ಅಂಕ ಗಳಿಸಲೇಬೇಕೆಂಬ ಉದ್ದೇಶದಿಂದ



ನಡೆಸಿದ ಅವಿರತ ಪ್ರಯತ್ನಗಳು ಫಲ ನೀಡಿದ್ದು ಶಿಕ್ಷಣ ಇಲಾಖೆ ಅಧಿಕಾರಿಗಳು ಸಂತಸಗೊಂಡಿದ್ದಾರೆ. ಮೇ 26 ರಿಂದ ಪರೀಕ್ಷೆ 2 ಹಾಗು ಜೂನ್‌ನಲ್ಲಿ ಪರೀಕ್ಷೆ 3 ನಡೆಸಲಾಗಿತ್ತು.

### 3441 ವಿದ್ಯಾರ್ಥಿಗಳ ಮೇಲೆ ನಿಗಾ

ಪರೀಕ್ಷೆ ಬರೆದಿದ್ದ 19248 ವಿದ್ಯಾರ್ಥಿಗಳಲ್ಲಿ 15807 ಮಕ್ಕಳು ಉತ್ತೀರ್ಣರಾಗಿ 3441 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದರು. ಪರೀಕ್ಷೆ 2 ಮತ್ತು 3ಕ್ಕೆ ಈ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವುದು ಶಿಕ್ಷಕರಿಗೂ ಸವಾಲಿನ ಕೆಲಸವಾಗಿತ್ತು. ಮೇ 2 ರಂದು ಪರೀಕ್ಷಾ ಫಲಿತಾಂಶ ಪ್ರಕಟವಾಗುತ್ತಿದ್ದಂತೆ ವಿಶೇಷ ಯೋಜನೆ ಹಾಕಿಕೊಂಡ ಹಿಂದಿನ ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಭಾರ ಉಪನಿರ್ದೇಶಕ ಹೆಚ್.ಎಸ್. ಚಂದ್ರಶೇಖರ್ ಅವರು ಶಿಕ್ಷರಿಗೆ ರಜೆ ಕಡಿತಗೊಳಿಸಿ ತರಗತಿಗೆ ಹಾಜರಾಗುವಂತೆ ಸೂಚಿಸಿದ್ದರು. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ತರಗತಿ ನಡೆಸುವಂತೆ ಆದೇಶ ಹೊರಡಿಸಿದ್ದರು.

ಮಗು ಯಾವ ವಿಷಯ ಕಲಿಕೆಯಲ್ಲಿ ಹಿಂದುಳಿದಿದೆ ಎಂಬುದನ್ನು ಪರಿಗಣಿಸಿ ಒತ್ತು ಕೊಟ್ಟು ಕಲಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಿಂದ ಮತ್ತೊಮ್ಮೆ ಪಾಠಗಳ ಪುನರ್ ಮನನ, ಚಟುವಟಿಕೆ ನೀಡಿ ಪರೀಕ್ಷೆಗೆ ಸನ್ನದ್ಧಗೊಳಿಸಲಾಗಿತ್ತು. ಬಹುತೇಕ ಗ್ರಾಮೀಣ ವಿದ್ಯಾರ್ಥಿಗಳು ಮೊದಲ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದರಿಂದ ಪರೀಕ್ಷೆ 2 ಮತ್ತು 3ಕ್ಕೆ ನಿರಾಸಕ್ತಿ ತೋರಿದ್ದರು. ಬಾಲಕಿಯರಂತು ನಮಗೆ ಶಾಲೆಯ ಸಹವಾಸವೇ ಬೇಡವೆಂದು ದೂರವುಳಿದಿದ್ದರು. ಅಂತವರ ಮನೆಗಳಿಗೆ ಅಧಿಕಾರಿಗಳು ಖುದ್ದಾಗಿ ಭೇಟಿ ನೀಡಿ ಪರೀಕ್ಷೆಗೆ ಅಣಿಗೊಳಿಸುವಲ್ಲಿ ಅವಿರತ ಶ್ರಮ ಹಾಕಿದ್ದರು.

### ಮುಂದಿನ ವರ್ಷಕ್ಕೆ ಈಗಿನಿಂದಲೇ ಸಿದ್ಧತೆ

2025-26ನೇ ಸಾಲಿನ ಎಸ್ ಎಸ್‌ಎಲ್‌ಸಿ ಪರೀಕ್ಷೆಗೆ ಈಗಿನಿಂದಲೇ ಸಾರ್ವಜನಿಕ ಶಿಕ್ಷಣ ಇಲಾಖೆ ಸಿದ್ಧತೆ ನಡೆಸುತ್ತಿದ್ದು, ಕಿರು ಪರೀಕ್ಷೆಗಳ ಮೂಲಕ ಮಕ್ಕಳ ವ್ಯಾಸಂಗದಲ್ಲಿ ಸುಧಾರಣೆ ತರಲು ಪ್ರಯತ್ನಿಸುತ್ತಿದೆ. ಪ್ರತಿ ಮೂರು ಪಾಠಕ್ಕೊಂದು ಕಿರು ಪರೀಕ್ಷೆ ನಡೆಸಲಾಗುತ್ತಿದೆ. ಮೊದಲ ಪರೀಕ್ಷೆಯಲ್ಲಿ ಕಡಿಮೆ ಅಂಕ ಗಳಿಸಿದ ವಿದ್ಯಾರ್ಥಿ 2ನೇ ಪರೀಕ್ಷೆಯಲ್ಲಿ ಕಡಿಮೆ ಅಂಕ ಗಳಿಸಿದ್ದರೆ ಅದಕ್ಕೆ ಕಾರಣ ಹುಡುಕಿ ಪರಿಹಾರ ಕಂಡುಕೊಳ್ಳಲಾಗುತ್ತಿದೆ. ತಿಂಗಳಿಗೊಮ್ಮೆ ತಾಯಂದಿರ ಸಭೆ, ಮನೆ ಮನೆ ಭೇಟಿ ಜೊತೆಗೆ ವಿದ್ಯಾರ್ಥಿಗಳೊಂದಿಗೆ ಪ್ರಗತಿ ಪರಿಶೀಲನೆಯನ್ನು ಪ್ರತಿ ಶಾಲೆಯಲ್ಲೂ ಮಾಡಲಾಗುತ್ತಿದ್ದು, ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಹಾಸನ ಮೊದಲ ಸ್ಥಾನದಲ್ಲಿರಬೇಕೆಂಬುದು ಅಧಿಕಾರಿಗಳ ಗುರಿಯಾಗಿದೆ.

# ಧಾರ್ಮಿಕ ಕ್ಷೇತ್ರಕ್ಕೆ ಪೆಟ್ಟು: ಕಿಡಿಗೇಡಿಗಳಿಗೆ ಪಾಠ ಕಲಿಸಬೇಕು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಹಿಂದುಗಳ ಶ್ರದ್ಧಾ ಕೇಂದ್ರವಾದ ಧರ್ಮಸ್ಥಳ ಕ್ಷೇತ್ರದ ಕುರಿತು ಅಪಪ್ರಚಾರ ಮಾಡುತ್ತಾ ಧಾರ್ಮಿಕ ಪರಂಪರೆಗೆ ಪೆಟ್ಟು ನೀಡುತ್ತಿರುವವರಿಗೆ ತಕ್ಕ ಪಾಠ ಕಲಿಸಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಸಕಲೇಶ್ವರಸ್ವಾಮಿ ದೇವಸ್ಥಾನ ಆವರಣದಲ್ಲಿ ಭಾನುವಾರ ರಾಮದೂತ ಗಣಪತಿ ಸೇವಾ ಸಮಿತಿಯ ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿ, ನಮ್ಮ ಧರ್ಮ, ಸಂಸ್ಕೃತಿಯ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯ. ಹಿಂದು ಧರ್ಮ ಹಾಗೂ ಪವಿತ್ರ ಸ್ಥಳ, ವ್ಯಕ್ತಿಗಳ ಮೇಲೆ ನಿರಂತರವಾಗಿ



ಅಪಪ್ರಚಾರ ಮಾಡಲಾಗುತ್ತಿದೆ. ಅದರಲ್ಲೂ ಧರ್ಮಸ್ಥಳ ಕ್ಷೇತ್ರ ಮತ್ತು ಧರ್ಮಾಧಿಕಾರಿಗಳ ವಿರುದ್ಧ ವ್ಯವಸ್ಥಿತ ಪಿತೂರಿ ನಡೆಯುತ್ತಿದೆ. ಇಂತಹ ಷಡ್ಯಂತ್ರದ ವಿರುದ್ಧ ನಾವೆಲ್ಲರೂ ಒಟ್ಟಾಗಿ ಹೋರಾಡಬೇಕಿದೆ. ಸಮಾಜ ಘಾತುಕರಿಗೆ ತಕ್ಕ ಪಾಠ ಕಲಿಸಬೇಕು ಎಂದರು.

ಪ್ರತಿವರ್ಷ ಪಟ್ಟಣದಲ್ಲಿ ರಾಮದೂತ ಗಣಪತಿ ಸೇವಾ ಸಮಿತಿ ವತಿಯಿಂದ ಗಣಪತಿ ಪ್ರತಿಷ್ಠಾಪನೆ ಮಾಡಲಾಗುತ್ತದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದರು.

ಹಿಂದೂ ಹಿತರಕ್ಷಣಾ ವೇದಿಕೆ ರಾಜ್ಯ ಮುಖಂಡ ರಘು ಸಕಲೇಶಪುರ ಮಾತನಾಡಿ, ಧರ್ಮಸ್ಥಳದ ಮೇಲೆ ನಡೆಯುತ್ತಿರುವ ಅಪಪ್ರಚಾರ ಕೂಡಲೇ ನಿಲ್ಲದಿದ್ದರೆ ಸಕಲೇಶಪುರದಿಂದ ಧರ್ಮಸ್ಥಳಕ್ಕೆ ಪಾದಯಾತ್ರೆ ಹಮ್ಮಿಕೊಳ್ಳಲಾಗುವುದು. ಕ್ಷೇತ್ರದ ವಿರುದ್ಧ ಸುಳ್ಳು ಸುದ್ದಿ ಹಬ್ಬಿಸುತ್ತಿರುವವರಿಗೆ ಸರ್ಕಾರ ಕಡಿವಾಣ ಹಾಕಬೇಕೆಂದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248